ಕರ್ನಾಟಕ ವಿಧಾನಸಭೆ

ಮಂಗಳವಾರ, ದಿನಾಂಕ: 15ನೇ ಮಾರ್ಚ್, 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಪ್ರೇರಣಾ ಟ್ರಸ್ಟ್ ದೇಣಿಗೆ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸುವಂತೆ ಪ್ರತಿಪಕ್ಷಗಳಿಂದ "ಧರಣಿ" :

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ಬಗ್ಗೆ ಚರ್ಚೆ ಮಾಡುವುದಕ್ಕೆ ಕೇಳಿದ್ದೇವೆ.

ಅಧ್ಯಕ್ಷರು: ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ನಾವು ಇನ್ನೂ ಕ್ಲಾರಿಫಿಕೇಷನ್ ಕೇಳುತ್ತಿದ್ದೆವು, ಕ್ಲಾರಿಫಿಕೇಷನ್ ಮುಗಿದಿರಲಿಲ್ಲ. ಇನ್ನು ನಾನೊಬ್ಬನೇ ಕ್ಲಾರಿಫಿಕೇಷನ್ ಕೇಳುತ್ತಿದ್ದೆ. ಅವರು ಮತ್ತು ಬೇರೆಯವರೂ ಕೂಡ ಕ್ಲಾರಿಫಿಕೇಷನ್ ಕೇಳಬೇಕಾಗಿತ್ತು. ಈಗ ಮತ್ತೆ ಮಾತನಾಡುವುದಕ್ಕೆ ಅವಕಾಶ ಇಲ್ಲ, ಬೇರೆಯವರಿಗೆಲ್ಲ ಕ್ಲಾರಿಫಿಕೇಷನ್ ಸಂದರ್ಭದಲ್ಲಿ ಅವಕಾಶ ಕೊಡುತ್ತೇನೆಂದು ತಾವೇ ಹೇಳಿದ್ದೀರಿ. ನಿಮ್ಮ ಮಾತಿಗೆ ಗೌರವ ಕೊಟ್ಟು ಈಗ ಮಾತನಾಡುವುದು ಬೇಡ, ನಾವೆಲ್ಲಾ ಕ್ಲಾರಿಫಿಕೇಷನ್ ಕೇಳೋಣವೆಂದು ಹಾಗೂ ಈಗಾಗಲೇ ಸಮಯ ಕೂಡ ಆಗಿದೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಬಹಳ ಕಾತುರ ಮತ್ತು ಆತುರದಲ್ಲಿದ್ದಾರೆಂದು, ನಿಮ್ಮ ಮಾತಿಗೆ ಮುಖ್ಯವಾಗಿ ಗೌರವ ಕೊಟ್ಟು ಅವರ್ಯಾರೂ ಸಹ ಮಾತನಾಡಲಿಲ್ಲ. ನೀವು ಅವರ್ಯಾರಿಗೂ ಅವಕಾಶ ಕೊಡದೇ ಈ ರೀತಿ ಮಾಡಿದರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಯವರು ಸರಿಯಾಗಿ ಉತ್ತರ ಸಹ ಕೊಡಲಿಲ್ಲ ಮತ್ತೆ ನಮ್ಮ

ಕ್ಲಾರಿಫಿಕೇಷನ್ ಸಹ ಮುಗಿಯಲಿಲ್ಲ. ಹಾಗೆಯೇ ನಮ್ಮ ಕ್ಲಾರಿಫಿಕೇಷನ್‌ಗೂ ಸಹ ಸರಿಯಾಗಿ ಉತ್ತರ ಕೊಡಲಿಲ್ಲ. ಆದ್ದರಿಂದ, ಚರ್ಚೆ ಮತ್ತು ಉತ್ತರ ಕೂಡ ಅಪೂರ್ಣವಾಗಿದೆ. ಕ್ಲಾರಿಫಿಕೇಷನ್ ಕೂಡ ಕೇಳಲಿಲ್ಲ. ಇಂಥ ಪ್ರಾಮುಖ್ಯವಾದಂಥ ವಿಚಾರವನ್ನು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿ, ಅದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ಉತ್ತರ ಕೊಡದಿದ್ದರೆ ನಾವು ಜನರಿಗೆ ಮೋಸ ಮಾಡಿದಂತೆ ಆಗುತ್ತದೆ. ಜನರಿಗೆ ಸರಿಯಾದ ರೀತಿಯಲ್ಲಿ ಮಾಹಿತಿ ಕೊಡುವುದರಲ್ಲಿ ವಿಫಲರಾಗುತ್ತೇವೆ. ಈ ಸರ್ಕಾರ ಕೂಡ ವಿಫಲವಾಗುತ್ತದೆ. ಜನರಿಗೆ ಮಾಹಿತಿ ಕೊಡುವುದಕ್ಕೋಸ್ಕರವೇ ಈ ಸದನ ಇರತಕ್ಕಂಥದ್ದು, ಈ ಸದನ ಸಾರ್ವಭೌಮ, ಜನರ ಸಮಸ್ಯೆಗಳನ್ನು ಮತ್ತು ಸರ್ಕಾರ ಮಾಡತಕ್ಕಂಥ ತಪ್ಪುಗಳು, ಭ್ರಷ್ಟಾಚಾರ, ಹಗರಣಗಳನ್ನು ನಾವು ಇಲ್ಲಿಯೇ ಹೇಳಬೇಕು. ಇದಕ್ಕಿಂಥ ದೊಡ್ಡ ಹಗರಣ ಯಾವುದು ಇದೆ ನೀವೇ ಹೇಳಿ? ನಾನು ಕ್ಲಾರಿಫಿಕೇಷನ್ ಕೇಳುತ್ತಿರುವಾಗ ನೀವು House adjourned ಎಂದು ಹೊರಟು ಹೋದರೆ ನಾವು ಏನು ಮಾಡಬೇಕು ಹೇಳಿ? Where should we get justice?

ಅಧ್ಯಕ್ಷರು: ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ನನಗೂ ಅವಕಾಶ ಕೊಡಿ.

SRI SIDDARAMAIAH : We are expecting justice at your hands only. I am expecting justice from your hands only. Where can I go ? Can I go to Mr. Yediyurappa ? He would not do justice.

MR. SPEAKER : That is a different issue.

SRI SIDDARAMAIAH : In the House you are supreme, we have to get justice from you only.

ಅಧ್ಯಕ್ಷರು: ಒಂದು ಗಂಟೆ ಕಾಲಾವಕಾಶ ಕೊಡುತ್ತೇನೆಂದು ನಾನು ಮೊದಲೇ ಹೇಳಿದ್ದೆ. ಆದರೆ, ತಾವು ನಾಲ್ಕು ಗಂಟೆ ಅವಧಿಯವರೆಗೆ

ಮಾತನಾಡಿದ್ದೀರಿ. ಕ್ಲಾರಿಫಿಕೇಷನ್ ಆದ ಮೇಲೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ರಿಪ್ಲೈ ಮಾಡಿದ್ದಾರೆ. ಎರೆಡರೆಡು ಸಲ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಇದು ರಾಜ್ಯಕ್ಕೆ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಿರುವಾಗ ಒಂದು ಗಂಟೆಯಲ್ಲಿ ಮುಗಿಸಿಬಿಡಿ, ಅರ್ಧ ಗಂಟೆಯಲ್ಲಿ ಮುಗಿಸಿಬಿಡಿ, ಕೇವಲ ಒಬ್ಬರು ಮಾತ್ರ ಕ್ಲಾರಿಫಿಕೇಷನ್ ಮಾತ್ರ ಕೇಳಿ ಎಂದು ಈ ರೀತಿ ಹೇಳಿದರೆ ಹೇಗಾಗುತ್ತದೆ?

(ಗೊಂದಲ)

ಅಧ್ಯಕ್ಷರು: ಇದು ರಾಜ್ಯದ issue.. ನಾನು ಹೇಳುವುದನ್ನು ಮೊದಲು ಕೇಳಿ. This is an issue pertaining to a private Trust.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇವೆ.

ಅಧ್ಯಕ್ಷರು : ಈಗ ಇಲ್ಲಿ ಕೇಳಿ this is an issue pertaining to a private Trust.

ಶ್ರೀ ಸಿದ್ದರಾಮಯ್ಯ : ನಿನ್ನೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

MR. SPEAKER : This pertains to a private Trust.

ಶ್ರೀ ಸಿದ್ದರಾಮಯ್ಯ : ಪ್ರೇರಣಾ ವಿದ್ಯಾ ಸಂಸ್ಥೆಗೆ...

MR. SPEAKER : This pertains to a private Trust.

ಶ್ರೀ ಸಿದ್ದರಾಮಯ್ಯ : ಜಿಂದಾಲ್‌ನವರು ಮತ್ತು ಆದರ್ಶದವರು ದೇಣಿಗೆಗಳ ಮೂಲಕ ದುಡ್ಡು ಕೊಟ್ಟಿದ್ದಾರೆ.

MR. SPEAKER : This is not a public issue.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಭ್ರಷ್ಟಾಚಾರಕ್ಕೋಸ್ಕರ ನಾವು ಒತ್ತಾಯ ಮಾಡಿರುವಂತಹದ್ದು ಸಿ.ಬಿ.ಐ. ಅವರು ಯಾವುದೇ ತನಿಖೆಗೆ ಸಿದ್ಧವೆಂದು ಹೇಳಿದರು. ಅವರು ಉತ್ತರದಲ್ಲಿ ಏನಾದರೂ ಹೇಳಿದ್ದಾರಾ ? ಸಿಬಿಐ ಬಿಟ್ಟು ಬೇರೆ ತನಿಖೆಯನ್ನು ನಾವು ನಂಬುವುದಿಲ್ಲ.

MR. SPEAKER : ನೀವು ನಿರೀಕ್ಷೆ ಮಾಡಿದಂತೆ ಉತ್ತರ ಕೊಡಿ ಎಂದು how can I say ? I cannot force the Chief Minister to ....

ಶ್ರೀ ಸಿದ್ದರಾಮಯ್ಯ : ನಾವು ಯಾವುದೇ ತನಿಖೆಗೆ ಸಿದ್ಧನಿದ್ದೇನೆ ಎಂದು ಹೇಳಿದರು.

MR. SPEAKER : How can I say ?

ಶ್ರೀ ಸಿದ್ದರಾಮಯ್ಯ : ಅವರು ಉತ್ತರದಲ್ಲಿ ಏನಾದರೂ ಹೇಳಿದ್ದಾರಾ?

MR. SPEAKER : This is a different issue.

ಶ್ರೀ ಸಿದ್ದರಾಮಯ್ಯ : ಇದರಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ನಡೆದಿದೆ, ಆ ಜಿಂದಾಲ್ ಮತ್ತು ಆದರ್ಶ ಕಂಪನಿಗೆ ಇವರು favour ಮಾಡಿರುವುದರಿಂದ ಅವರು ಪ್ರೇರಣಾ ವಿದ್ಯಾಸಂಸ್ಥೆಗೆ ಹಣವನ್ನು ಕೊಟ್ಟಿದ್ದಾರೆ. ಅದನ್ನು

(ಗೊಂದಲ)

ಅಧ್ಯಕ್ಷರು : ಈಗ ಅದು ಮುಗಿದ ವಿಚಾರ. ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ : ಅದನ್ನು bribe, illegal ratification ಎಂದು ಹೇಳಬೇಕಾಗುತ್ತದೆ. ಆ ಕಾರಣದಿಂದ ನಾವು ಸಿಬಿಐಗೆ demand ಮಾಡುತ್ತೇವೆ. ಸಿಬಿಐ ತನಿಖೆಗೆ ಸರ್ಕಾರವು ಒಪ್ಪಿಕೊಳ್ಳಬೇಕು. ಸತ್ಯವು ಗೊತ್ತಾಗಬೇಕು. ಈ ರಾಜ್ಯದ ಜನರಿಗೆ ಸತ್ಯವೇನೆಂದು ಗೊತ್ತಾಗಬೇಕು. ಆ ಕಾರಣದಿಂದ ನಾವು ಸಿಬಿಐಗೆ ಒತ್ತಾಯವನ್ನು ಮಾಡುತ್ತೇವೆ. ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ನಮ್ಮ ಒತ್ತಾಯ. ಅವರು ನನ್ನ ಪ್ರಕಾರ ಇಷ್ಟು ಹೊತ್ತಿಗೆ ರಾಜೀನಾಮೆಯನ್ನು ಕೊಟ್ಟುಬಿಡಬೇಕಾಗಿತ್ತು. ಈ ದೇಶದಲ್ಲಿ ನಡೆದಿರತಕ್ಕಂತಹ ನಿದರ್ಶನಗಳನ್ನು ನೋಡಿದರೆ.. ಮಹಾರಾಷ್ಟ್ರದ 3 ಜನ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರು. ಶಶಿತರೂರ್ ಅವರು ರಾಜೀನಾಮೆಯನ್ನು ಕೊಟ್ಟರು. ಅಂತುಳೆ ರಾಜೀನಾಮೆಯನ್ನು ಕೊಟ್ಟರು. ಇಳಂಗೇಳ್ಕರ್ ರಾಜೀನಾಮೆಯನ್ನು ಕೊಟ್ಟರು.

ಕೊನೆ ಕೊನೆಗೆ ಈಚೆಗೆ ಸೈನ್ ಮಾಡಿರುವುದಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅದಕ್ಕಿಂತ ಬಹಳ ಗಂಭೀರವಾದಂತಹ ತೀವ್ರವಾದಂತಹ ಭಷ್ಟಾಚಾರ ಇದ್ದರೂ ಕೂಡ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡುವುದಿಲ್ಲವೆಂದರೆ ...

ಅಧ್ಯಕ್ಷರು : ಇದಕ್ಕೆ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ : ಇವರು ಯಾವುದಕ್ಕೂ ಒಪ್ಪುವುದಿಲ್ಲವೆಂದರೆ ನಾವು ಇದನ್ನು ವಿರೋಧ ಮಾಡಿ ನಾವು ಪ್ರತಿಭಟನೆಯನ್ನು ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

ಶ್ರೀ ಎಸ್. ಸುರೇಶ್ ಕುಮಾರು (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು Question Hour ಅನ್ನು ಶುರು ಮಾಡಿ.

ಅಧ್ಯಕ್ಷರು : ಆಯಿತು, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿದ್ದೇನೆ. ಈಶ್ವರ್ ಭೀಮಣ್ಣ ಖಂಡ್ರೆಯವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಾಭಾಧ್ಯಕ್ಷರೆ, ಈ ಸರ್ಕಾರವು ಮಾಡಿರುವಂತಹ ಭ್ರಷ್ಟಾಚಾರವನ್ನು ಮುಚ್ಚಿಹಾಕುವುದಕೋಸ್ಕರ ನೀವು ಸಹಕಾರವನ್ನು ಕೊಡುತ್ತಿದ್ದೀರಿ. ಇದರ ವಿರುದ್ಧ ನಾವು ಧರಣಿ ಮಾಡುತ್ತಿದ್ದೇವೆ. ಇದನ್ನು ಸಿಬಿಐಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಶಾಸಕರು ಸದನದ ಬಾವಿಗೆ ಬಂದರು)

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಸಭಾಧ್ಯಕ್ಷರೆ, ಬಹುಶಃ ರವಿಯವರು ಕೊಟ್ಟಿರುವಂತಹ ನಿಯಮ 69ಗೆ ಇವರು ಒಳಗೆ ಬಂದು ನಿಂತುಬಿಟ್ಟಿದ್ದಾರಾ ಅಂತ. ಆ 69 ಬಂದರೆ ಇವರ ಬಣ್ಣವು ಹೊರಗೆ ಬರುತ್ತದೆ ಎಂದು ಇವರು ಒಳಗೆ ಬಂದಿದ್ದಾರಾ ಅಂತ. ನಿಮ್ಮ 69ಗೆ ಈ ಪ್ರಕರಣವು ನಡೆಯುತ್ತಿರುವುದು.

ಒಬ್ಬ ಮಾನ್ಯ ಸದಸ್ಯರು : ರೂಲ್ 69ಗೆ ಹೆದರಿ ಒಳಗೆ ಬಂದಿದ್ದಾರೆ.

ಅಧ್ಯಕ್ಷರು : ತಾವು ವಾಪಸ್ಸು ತೆಗೆದುಕೊಳ್ಳಿ. Take back that word. ಹಾಗೆ ಅಲ್ಲಿ ನಿಂತುಕೊಂಡು ಪಕ್ಷಪಾತಿ ಎಂದು ಹೇಳುವುದಲ್ಲ. No. No. I am not ready to hear.

ಶ್ರೀ ಸಿದ್ದು ಸವದಿ : ಕಾಂಗ್ರೆಸ್ ಮತ್ತು ಜೆಡಿಎಸ್‌ನವರ ಬಣ್ಣ ಹೊರಗೆ ಬರುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ನಮಗೆ ರೂಲ್ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. 167 ಕೋಟಿ ರೂಪಾಯಿಗಳ ...

ಅಧ್ಯಕ್ಷರು : ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದು ಸವದಿ : ನೂರಾರು ಕೋಟಿ ರೂಪಾಯಿಗಳ ಹಗರಣ, ಅಮಾನತ್ ಕೋ-ಆಪರೇಟಿವ್ ಬ್ಯಾಂಕ್‌ನ ಹಗರಣ. ಈ ಹಗರಣ ನೋಡಿದರೆ donation ತೆಗೆದುಕೊಂಡಿದ್ದಾರೆ. ಅಮಾನತ್ ಬ್ಯಾಂಕಿನಿಂದ 167 ಕೋಟಿ ರೂಪಾಯಿ ಹೆಚ್.ಡಿ. ಕುಮಾರಸ್ವಾಮಿ ಮತ್ತು ರೇವಣ್ಣನವರ ಕುಟುಂಬದ ಸದಸ್ಯರ ಖಾತೆಗೆ ಬಂದು ಜಮಾ ಆಗಿದೆ. 167 ಕೋಟಿ ರೂಪಾಯಿಗಳು ...

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ specific ಆಗಿ ಹೇಳಿದ್ದೇವೆ. Ultimately, CBI ಬಗ್ಗೆ ನಮ್ಮ ಪಕ್ಷದ ನಿಲುವನ್ನು ಹೇಳಿದ್ದೇವೆ. ಅದರ ಬಗ್ಗೆ ಚರ್ಚೆಯನ್ನೇ ಮಾಡಬೇಡಿ. ಸಿಬಿಐ ಬಗ್ಗೆ ನಮ್ಮ ಪಕ್ಷದ ಅಖಿಲ ಭಾರತೀಯ ನಿಲುವು ಕಾಂಗ್ರೆಸ್ Bureau of Investigationಗೆ ಯಾವುದನ್ನು ಸಹ ತನಿಖೆಗಾಗಿ ಕೊಡುವುದಿಲ್ಲ. ಅದು ಬೇರೆ ಪ್ರಶ್ನೆ, ನಾವು ಸಿಬಿಐಗೆ ಕೊಡುವುದಿಲ್ಲ. ಸಿಬಿಐ ಮಾಡುತ್ತಿರುವಂತಹ ಅನಾಹುತವನ್ನು ನೋಡಿದ್ದೇವೆ, ಕಳ್ಳರನ್ನು ಬಿಡುವುದು ಅಮಾಯಕರನ್ನು arrest ಮಾಡುವುದು ಸಿಬಿಐನದ್ದು ನಮಗೆ ಚೆನ್ನಾಗಿ ಗೊತ್ತಿದೆ.

ಅಧ್ಯಕ್ಷರು : ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಎಲ್ಲರೂ ಸಹಕರಿಸಿ.

(ಸದನದ ಬಾವಿಯಿಂದ ಜೆಡಿಎಸ್ ಶಾಸಕರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಎಸ್. ಸುರೇಶ್ ಕುಮಾರ್ : ಇದು ಪ್ರಜಾತಂತ್ರದ ವಿರೋಧಿ ನಿಮ್ಮ Bureau of Investigation ಗೆ ಕೈಕಟ್ಟಿ ಕುಳಿತುಕೊಳ್ಳುವುದು ಅದು ಪ್ರಜಾತಂತ್ರದ ವಿರೋಧಿಯಾಗಿದೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿರುವಂತಹ ಭ್ರಷ್ಟಾಚಾರ ....

(ಶ್ರೀ ಸಿದ್ದರಾಮಯ್ಯನವರು ಸದನದ ಬಾವಿಯೊಳಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಎಸ್. ಸುರೇಶ್ ಕುಮಾರ್ : May be. Even Speaker post ಕೂಡ constitutionally created.

(ಗೊಂದಲ)

ಅಧ್ಯಕ್ಷರು : ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಎಂದು ವಿನಂತಿಯನ್ನು ಮಾಡುತ್ತೇನೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. Please....

(ಗೊಂದಲ)

ಶ್ರೀ ಸಿದ್ದು ಸವದಿ : ಇಲ್ಲಿ ನಿಮ್ಮ ಹಣೆಬರಹವು ಇದೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಸನ್ಮಾನ್ಯ ಅಧ್ಯಕ್ಷರೆ ...

(ಗೊಂದಲ)

ಅಧ್ಯಕ್ಷರು : Please ಎಲ್ಲರೂ ಸಹಕಾರವನ್ನು ಮಾಡಿ.

(ಗೊಂದಲ)

ಶ್ರೀ ಸಿದ್ದು ಸವದಿ : ಇವೆಲ್ಲವೂ ಸಂಪೂರ್ಣವಾಗಿ ತನಿಖೆಯಾಗಲಿ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಭ್ರಷ್ಟಾಚಾರವನ್ನು ಮಾಡಿರುವವರು ಯಾರು ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಸಹಕಾರವನ್ನು ನೀಡಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ : ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಆದಂತಹ ಭ್ರಷ್ಟಾಚಾರ ..... ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

(ಗೊಂದಲ)

ಶ್ರೀ ಸಿದ್ದು ಸವದಿ : 167 ಕೋಟಿ ರೂಪಾಯಿಗಳು ...

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ : ನಮಗೆ ಒಂದು ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು 11 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಅರ್ಧಗಂಟೆಯ ನಂತರ ಸಮಾವೇಶಗೊಳ್ಳಲು ನಿಃಶ್ಚಯಿಸಿತು.)

(ಸದನವು 1.15 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಜೆ.ಡಿ.ಎಸ್. ಹಾಗೂ ಕಾಂಗ್ರೆಸ್ ಪಕ್ಷದ ಶಾಸಕರು ಬಾವಿಯಲ್ಲಿ ಬಂದು ಧರಣಿ ಮುಂದುವರೆಸಿದರು)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಪ್ರಾರಂಭ ಮಾಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ 116 ಕೋಟಿ ರೂ. ಇದೆ. ಎಂದು ಛಾರ್ಜ್ ಮಾಡಿದ್ದಾರೆ. ನಾನು ಹಕ್ಕುಚ್ಯುತಿ ನಿರ್ಣಯ ಮಂಡಿಸುತ್ತಿದ್ದೇನೆ. ನನ್ನ ಬಳಿ 116 ಕೋಟಿ ರೂ. ಇದ್ದರೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಿ. ದಯಮಾಡಿ ನಾನು ಹಕ್ಕುಚ್ಯುತಿ ನಿರ್ಣಯ ಮಂಡಿಸುತ್ತಿದ್ದೇನೆ. ದಯಮಾಡಿ ತಾವು ನನಗೆ ಅನುಮತಿ ಕೊಡಬೇಕು. ನೇರವಾಗಿ ಹೇಳಲಿ ಇಲ್ಲದಿದ್ದರೆ ಕ್ಷಮೆ ಕೇಳಲಿ. ಇದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು: ತಾವುಗಳೆಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಪ್ರಶ್ನೋತ್ತರ ಕಲಾಪ ನಡೆಸೋಣ.

ಶ್ರೀ ಹೆಚ್.ಡಿ. ರೇವಣ್ಣ: ಈ ಸದನದ ಮೂಲಕ ರಾಜ್ಯದ ಜನತೆಗೆ ತಪ್ಪು ಮಾಹಿತಿ ಹೋಗುತ್ತಿದೆ. ಮಾನ್ಯ ಅಧ್ಯಕ್ಷರೆ ದಯಮಾಡಿ ತಾವು ಅನುಮತಿ ಕೊಡಬೇಕು.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಈ ತರಹ ಬ್ಲಾಕ್‌ಮೇಲ್ ಮಾಡುವುದು ಅಲ್ಲ. 116 ಕೋಟಿ ಅಕೌಂಟ್ ಇಲ್ಲವೆಂದು ಹೇಳುತ್ತಿದ್ದಾರೆ. ಅದು ಯಾವುದಿದೆ ಎಲ್ಲವನ್ನೂ ಸಭೆಯ ಮುಂದೆ ರೆಕಾರ್ಡ್ ಇಡಲಿ. ಇಲ್ಲದಿದ್ದರೆ ಕ್ಷಮೆ ಕೇಳಲಿ.

ಅಧ್ಯಕ್ಷರು: ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ನೆನ್ನೆ ಕೂಡ ಹೇಳಿದ್ದೇವೆ. ಇವತ್ತೂ ಕೂಡ ಹೇಳಿದ್ದೇವೆ. ಈ case ಹೇಗಿದೆ ಎಂದರೆ, we have made out a very good case. We have pleaded with all relevant documents. ಈ ಕೇಸ್ ಹೇಗಿದೆ ಎಂದರೆ, ಅಂಗೈ ಹುಣ್ಣಿಗೆ ಕನ್ನಡಿ ಬೇಕಾ ಎನ್ನುವ ಹಾಗಿದೆ ಈ ಕೇಸು. ದುಡ್ಡು ತೆಗೆದುಕೊಂಡಿರುವುದು ಅಡ್ಮಿಷನ್ ಆಗಿ ಬಿಟ್ಟಿದೆ. ಆ ದುಡ್ಡು illegal gratification. ಅದು ಡೊನೇಷನ್ ಎಂದು ಅವರು ಹೇಳುತ್ತಾರೆ. ಅದು ವಾಸ್ತವವಾಗಿ illegal gratification. Kick back ಎಂದು ನಾವು ಅದನ್ನು ಕರೆಯಬಹುದು. Kick

back. ಆದ್ದರಿಂದ ಈ Kick back ಇಷ್ಟೊಂದು ಇರುವಾಗ, ಇದು ಚೆಕ್‌ಗಳ ಮೂಲಕ ಕಾಣಿಸುವುದು. ಚೆಕ್‌ಗಳ ಮೂಲಕ ಇಲ್ಲದೇ ಇರುವುದು ಬೇರೆ ಇದೆ. ಅದು ಬೇರೆ. ಇದೆಲ್ಲಾ ಅನ್ವರ್ಥ ಆಗಬೇಕಲ್ಲಾ? ರಾಜ್ಯದಲ್ಲಿ ಎಲ್ಲರಿಗೂ ಗೊತ್ತಾಗಬೇಕಲ್ಲ. ಅದು ಗೊತ್ತಾಗಬೇಕಾದರೆ, ಮೈಸೂರು ಮಿನರಲ್ಸ್‌ನಿಂದ ನೂರಾರು ಕೋಟಿ ರೂಪಾಯಿ ನಷ್ಟವಾಗಿದೆ. ಜಿಂದಾಲ್‌ನವರು ಅವರೂ ಶಾಮೀಲಾಗಿ ಸಾವಿರಾರು ಕೋಟಿ ರೂ. ಲೂಟಿ ಹೊಡೆಯುತ್ತಿದ್ದಾರೆ. ಅದರಿಂದ ಸರ್ಕಾರಕ್ಕೆ ದೊಡ್ಡ ನಷ್ಟವಾಗುತ್ತಿದೆ. ಪಾಪ ಇವರಿಗೆ ಒಂದಷ್ಟು ಕೊಟ್ಟು ಅವರೆಲ್ಲಾ ತಿಂದುಕೊಳ್ಳುತ್ತಿದ್ದಾರೆ. ಇವೆಲ್ಲಾ ಈ ರಾಜ್ಯದ ಜನಗಳಿಗೆ ಗೊತ್ತಾಗಬೇಕು. ಈ ಕಿಕ್‌ಬ್ಯಾಕ್ ಬಗ್ಗೆ ಹೊರಬರಬೇಕೆಂದರೆ C.B.I. is the only proper agency to investigate into this type of scandal. ಇನ್ನೊಂದು ವಿಷಯವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳೇ ಗಣಿ ಮತ್ತು ಭೂವಿಜ್ಞಾನ ಖಾತೆಯ ಮಂತ್ರಿಗಳಾಗಿದ್ದಾರೆ, ಬೆಂಗಳೂರು ನಗರಾಭಿವೃದ್ಧಿ ಖಾತೆಯ ಮಂತ್ರಿಗಳಾಗಿದ್ದಾರೆ. How can he continue as Chief Minister? ಆದುದರಿಂದ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು ಮತ್ತು ಸಿ.ಬಿ.ಐ. ತನಿಖೆಗೆ ವಹಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸರ್ಕಾರ ಈಗಾಗಲೇ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದೆ. ಆದುದರಿಂದ ಬಾವಿಯಲ್ಲಿರುವ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಲಾಪವನ್ನು ಸುಗಮವಾಗಿ ನಡೆಸುವುದಕ್ಕೆ ಸಹಕರಿಸಬೇಕೆಂದು ನಾನು ವಿನಂತಿಯನ್ನು ಪ್ರತಿಪಕ್ಷದವರಲ್ಲಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಬಾವಿಯಲ್ಲಿರುವ ಸದಸ್ಯರುಗಳಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಲಾಪ ನಡೆಸಲು ಸಹಕರಿಸಿ.

(ಬಾವಿಯಲ್ಲಿ ಧರಣಿ ನಿರತರಿದ್ದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಮತ್ತೊಮ್ಮೆ ಪ್ರತಿ ಪಕ್ಷದವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ಸಹಕರಿಸಬೇಕು.

ಅಧ್ಯಕ್ಷರು: ನಾನು ಎಲ್ಲಾ ಸದಸ್ಯರಲ್ಲಿ ಮತ್ತೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಬಾವಿಯಲ್ಲಿ ಧರಣಿ ನಿರತರಿದ್ದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 22 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸದನವು 4 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಶ್ರೀ ಆರ್. ಅಶೋಕ್ (ಗೃಹ ಹಾಗೂ ಸಾರಿಗೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈಗ Question Hourನಲ್ಲಿ ಬಹಳಷ್ಟು ಪ್ರಶ್ನೆಗಳು ಇವೆ.

ಅಧ್ಯಕ್ಷರು : ಎಲ್ಲಾ ಸದಸ್ಯರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ತಮ್ಮಗಳ ಸ್ಥಾನಗಳಿಗೆ ಹೋಗಿ, ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಸಹಕಾರವನ್ನು ಮಾಡಿ.

ಶ್ರೀ ಆರ್. ಅಶೋಕ್ : ದಯವಿಟ್ಟು Question Hour ಅನ್ನು ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನನ್ನ ನಿಲುವನ್ನು ತಿಳಿಸಿದ್ದೇವೆ. ನಾಳೆ ಬೆಳಿಗ್ಗೆ.....

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನುನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಕಾನೂನು ಒಂದು ವ್ಯವಸ್ಥೆ..

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾವು ಹಲವಾರು ವಿಚಾರಗಳನ್ನು ಕೊಟ್ಟಿದ್ದೇವೆ. ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ...

ಶ್ರೀ ಆರ್. ಅಶೋಕ್ : ಪ್ರಶ್ನೋತ್ತರವು ಯಾವುದೇ ಕಾರಣಕ್ಕೂ ನಿಲ್ಲಬಾರದು. ಇಲ್ಲಿ ಬಹಳಷ್ಟು ಪ್ರಶ್ನೆಗಳು ಇವೆ.

ಅಧ್ಯಕ್ಷರು : ಈಗ ವೆಲ್‌ನೊಳಗೆ ಏನೇ ಮಾತನಾಡಿದರು ಅದು ದಾಖಲೆಗೆ ಹೋಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು, ಹಾಗೂ ಈ ವಿಚಾರವನ್ನು ಸಿಬಿಐಗೆ ವಹಿಸಬೇಕು ಎರಡು ಬೇಡಿಕೆ ನಮ್ಮದು ಇದೆ. ಆ ಬೇಡಿಕೆಯನ್ನು ಈಡೇರಿಸದಿದ್ದರೆ ನಾವು ಧರಣಿಯನ್ನು continue ಮಾಡುತ್ತೇವೆ.

ಶ್ರೀ ಆರ್. ಅಶೋಕ್ : ಇವರು ವೆಲ್‌ನೊಳಗೆ ಇದ್ದಾಗ ಎಂಎಲ್‌ಎದ್ದು ಸಂಬಳದ್ದು ಜಾಸ್ತಿ ಮಾಡಬೇಕಂತೆ ? ಇಲ್ಲಿ ನಾವು ಅಪರಾಧಿಗಳು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ...

ಅಧ್ಯಕ್ಷರು : ಇಲ್ಲಿ ಸ್ವಲ್ಪ ಜನ ಬಾವಿಯೊಳಗೆ ಸ್ವಲ್ಪ ಜನ ಅಲ್ಲಿ ಮಾತನಾಡುತ್ತಿದ್ದೀರಿ,...

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲಿ ನಾವು ಎಲ್ಲವನ್ನು ದಾಖಲೆ ಸಮೇತ ಇಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು ಹಾಗೂ ಇದನ್ನು ಸಿಬಿಐಗೆ entrust ಮಾಡುವುದು ಇದು ನಮ್ಮ ಬೇಡಿಕೆಯಾಗಿದೆ. ಆದ್ದರಿಂದ ದಯಮಾಡಿ...

ಅಧ್ಯಕ್ಷರು : ಯಾವುದು ಕೂಡ ದಾಖಲೆಗೆ ಹೋಗುವುದಿಲ್ಲ.

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಯಾವುದನ್ನು ದಾಖಲು ಮಾಡಿರುವುದಿಲ್ಲ)

ಅಧ್ಯಕ್ಷರು : ಯಾವುದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಸಭಾನಾಯಕರೆ,....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು : ಯಾವುದು ದಾಖಲೆಗೆ ಹೋಗುವುದಿಲ್ಲ.

ಶ್ರೀ ಸಿದ್ದು ಸವದಿ : ನಿಯಮ 60ರ ಅಡಿಯಲ್ಲಿ ನಾವು ಚರ್ಚೆ ಮಾಡುವುದಕ್ಕೆ ಕೊಟ್ಟಿದ್ದೇವೆ. ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಆರ್. ಅಶೋಕ್ : ಸದನ ನಡೆಯುವುದಕ್ಕೆ ಕಾಂಗ್ರೆಸ್‌ನವರಿಗೆ ಜೆಡಿಎಸ್‌ನವರಿಗೆ ಇಷ್ಟವಿಲ್ಲ.

ಶ್ರೀ ಸಿದ್ದು ಸವದಿ : ನಿಯಮ 60ರೊಳಗೆ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್‌ನ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಕೊಟ್ಟಿದ್ದೇವೆ. ಸುಮಾರು 100 ಕೋಟಿ ರೂಪಾಯಿಗಳು ದುರುಪಯೋಗವಾಗಿದೆ.

ಅಧ್ಯಕ್ಷರು : ಎರಡು ಕಡೆಗೂ convenience ಮಾಡುವ ಪ್ರಯತ್ನವನ್ನು ಮಾಡಿದ್ದೇನೆ.

ಶ್ರೀ ಸಿ.ಟಿ. ರವಿ : ನಾವು ನಿಯಮ 60ರ ಅಡಿಯಲ್ಲಿ 150 ಕೋಟಿ ರೂಪಾಯಿಗಳು ಲೂಟಿ ಹೊಡೆದಿರುವ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ, Please.. important ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು ಇವೆ, ಶೂನ್ಯವೇಳೆ ಇದೆ, ಹಲವು ವಿಚಾರಗಳನ್ನು ಕೊಟ್ಟಿದ್ದೀರಿ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಕಾನೂನಿಗೆ ಅದಕ್ಕೆ ಅವಕಾಶವಿಲ್ಲ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಶ್ರೀ ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ನಿನ್ನೆ 5 ಗಂಟೆಗಳ ಕಾಲ ಈ ಬಗ್ಗೆ ಚರ್ಚೆಯಾಗಿದೆ. ಇದಕ್ಕೆ ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದೇವೆ. ಚರ್ಚೆ ಮುಗಿದಿದೆ. ಈಗ ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ವಿಧೇಯಕಗಳು ಇವೆ ಅದನ್ನು ಮುಗಿಸೋಣ.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ, Please, ಎಲ್ಲರೂ ಸಹಕಾರವನ್ನು ಮಾಡಿ.

(ಗೊಂದಲ)

ಅಧ್ಯಕ್ಷರು : Please, ಸಹಕಾರವನ್ನು ಮಾಡಿ. ನಾನು ಕೊನೆಯದಾಗಿ ಎಲ್ಲರಲ್ಲಿ ವಿನಂತಿಯನ್ನು ಮಾಡುತ್ತೇನೆ. ಕಾರ್ಯಕಲಾಪವನ್ನು ನಡೆಸುವುದಕ್ಕೆ ಸಹಕಾರವನ್ನು ಮಾಡಿ. ಈಗ ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಆಡಳಿತ ಪಕ್ಷದವರು .... ಮಾನ್ಯ ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕು ಅಥವಾ ಸಿಬಿಐ enquiryಗೆ ನೀವು ಎರಡರಲ್ಲಿ ಒಂದು ನಿಲುವನ್ನು ತೆಗೆದುಕೊಳ್ಳಬೇಕು.

(ಗೊಂದಲ)

(ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಸಿಬಿಐ ತನಿಖೆ ಆಗಲೇಬೇಕೆಂದು ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಸಭಾಧ್ಯಕ್ಷರೆ, ಸದನವನ್ನು ದಯವಿಟ್ಟು ನಡೆಸಿ, ಇಲ್ಲದೆ ಹೋದರೆ ತಾವು ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ದುಡ್ಡು ಲೀನ್ ಆಗಿ ಬಳಸಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ನಾನು ಕೊನೆಯ ಬಾರಿಗೆ ಎಲ್ಲರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಸದನವನ್ನು ನಡೆಸೋಣ. ಗಮನ ಸೆಳೆಯುವ ಬಗ್ಗೆ ತಾವು ವೆಲ್‌ನಲ್ಲಿ ಇದ್ದು ಕೇಳುತ್ತಿದ್ದೀರಿ, ತಾವುಗಳೆಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ, ಇಲ್ಲಿ ಮಾತನಾಡಿದರೆ ಯಾವುದು ದಾಖಲೆಗೆ ಹೋಗುವುದಿಲ್ಲ. ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿಯಲ್ಲಿ ಇಲ್ಲಿಯೇ ನಿಂತುಕೊಂಡು ಗಮನ ಸೆಳೆಯುತ್ತೇನೆಂದು ಕೇಳುತ್ತಿದ್ದಾರೆ. ಅವರು ಈಗ ಕೇಳಿದರು. ತಾವು ಅಲ್ಲಿಗೆ ಹೋಗಿ ಕೇಳಿ ತಮಗೆ ಅವಕಾಶವನ್ನು ಕೊಡುತ್ತೇನೆ.

(ಸದನದ ಬಾವಿಯಿಂದ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ಸಿಬಿಐ ತನಿಖೆ ಆಗಲೇಬೇಕೆಂದು ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಅಲ್ಲಿ ಹೋಗಿ ಕೇಳಿ, ತಮಗೆ ಅವಕಾಶವನ್ನು ಕೊಡುತ್ತೇನೆ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿಯವರಿಗೆ ಈಗ ಗಮನ ಸೆಳೆಯುವ ಸೂಚನೆ ಬೇಕಂತೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಸಭಾಧ್ಯಕ್ಷರೆ, ಘೋಷಣೆಯನ್ನು ಕೂಗುವಾಗ ನಗುನಗುತ್ತಾ ಇದ್ದರೆ ಕ್ಯಾಮರಾ ಮುಖಾಂತರ

ನೀವು ಘೋಷಣೆಯನ್ನು ಕೂಗುತ್ತಿರುವುದು ಯಾವ ಮಟ್ಟದ್ದು ಎಂದು ಗೊತ್ತಾಗುತ್ತದೆ. So, ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

(ಸದನದ ಬಾವಿಯಿಂದ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ಸಿಬಿಐ ತನಿಖೆ ಆಗಲೇಬೇಕೆಂದು ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 12 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 4 ಗಂಟೆ 26 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ: 16.03.2011 ರಂದು ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

* * * * *